ಅದಾ 17/10 ಡಿ.ಡಬ್ಲು.1 ದಿ.03-01-19

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಟಿ ಎಂ ವಕೀಲರಿಂದಃ

ನಾನು ಓದಿರುವುದಿಲ್ಲ. ರಂಗಮ್ಮ ಜಮೀನಿಗೋಸ್ಕರ ಈ ದಾವೆಯನ್ನು ಸಲ್ಲಿಸಿದ್ದಾರೆ. ಪ್ರತಿವಾದಿ-13 ನನ್ನ ದೊಡ್ಡಪ್ಪ. ನಾನು ಈ ದಾವೆಯಲ್ಲಿ ಹಾಜರಾದ ನಂತರ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿದ್ದೇನೆ. ಮರಸುಹೊಸಳ್ಳಿಯಲ್ಲಿ ನಾನು ಹುಟ್ಟಿನಿಂದ ಇದ್ದೇನೆ. ಮರಸುಹೊಸಳ್ಳಿಯವರ ಗ್ರಾಮಸ್ಥರ ಪರಿಚಯ ನನಗಿದೆ. ತಿಮ್ಮೇಗೌಡ , ಸಕನಯ್ಯ , ಯಾಲಕ್ಕಿಗೌಡರ ಬಗ್ಗೆ ತಿಳಿದಿದೆ. ಆದರೆ ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಒಂದು ವರುಷದ ಹಿಂದೆ ಮೃತರಾಗಿರುತ್ತಾರೆ.

ತಿಮ್ಮೇಗೌಡರಿಗೆ ಇಬ್ಬರು ಹೆಣ್ಣು ಮಕ್ಕಳು ಎಂದರೆ ತಿಮ್ಮೇಗೌಡರಿಗೆ 3 ಜನ ಮಕ್ಕಳು ಎಂದು ಹೇಳುತ್ತಾರೆ , ಅವರ ಹೆಸರು ಗೊತ್ತಿಲ್ಲ. ನಾನು ಜಮೀನನ್ನು ಖರೀದಿಸಿದ ದಿನಾಂಕ ಗೊತ್ತಿಲ್ಲ. ಸುಮಾರು 4-5 ವರುಷವಾಗಿದೆ. ಜಮೀನು ಖರೀದಿಸುವಾಗ ಅದು ಹಿಂದೆ ಯಾರಿಗೆ ಸೇರಿದ್ದು , ಹೇಗೆ ಬಂತು ಎಂದು ವಿಚಾರಿಸುತ್ತಾರೆ ಎಂದರೆ ಸರಿ. ನೀವು ಖರೀದಿಸಿರುವ ಜಮೀನು ಯಾಲಕ್ಕೀಗೌಡ , ತಿಮ್ಮೇಗೌಡ , ಸಕನೇಗೌಡರಿಗೆ ಸೇರಿದ ಆಸ್ತಿ ಎಂದರೆ ಸರಿ. ಈ ಜಮೀನು ರಾಜೇಗೌಡರಿಗೆ ಸೇರಿದ್ದು ಎಂದು ನನ್ನ ದೊಡ್ಡಪ್ಪ ಹೇಳಿರುತ್ತಾರೆ. ರಾಜೇಗೌಡರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ವಿಚಾರಗಳು ತಿಳಿದಿದೆ. ಮಂಗಳೂರು ಹೆಂಚಿನ ಮನೆ ದಾವೆಗೆ ಸೇರಿಸಿಲ್ಲ ಎಂದು ಹೇಳಿರುವ ಮನೆ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಮನೆ ನಂಬರ್ ನನಗೆ ಗೊತ್ತಿಲ್ಲ. ರತ್ನಮ್ಮ ವಾಸವಿದ್ದಾರೆ ಎಂದು ಹೇಳುವ ಹೆಂಚಿನ ಮನೆಯ ನಂಬರ್ ಗೊತ್ತಿಲ್ಲ , ಅದು ಯಾರಿಗೂ ಸೇರಿದ್ದು ಎಂದು ಗೊತ್ತಿಲ್ಲ. ಪುಟ್ಟರಾಜೇಗೌಡ ಬಿನ್ ಸಕನೇಗೌಡ ವಾಸವಿದ್ದಾರೆ ಎಂದು ಹೇಳುವ ಹೆಂಚಿನ ಮನೆಯ ನಂಬರ್ ಗೊತ್ತಿಲ್ಲ , ಅದು ಯಾರಿಗೂ ಸೇರಿದ್ದು ಎಂದು ಗೊತ್ತಿಲ್ಲ. ಹನುಮಂತೇಗೌಡ ವಾಸವಿದ್ದಾರೆ ಎಂದು ಹೇಳುವ ಹೆಂಚಿನ ಮನೆಯ ನಂಬರ್ ಗೊತ್ತಿಲ್ಲ , ಅದು ಯಾರಿಗೂ ಸೇರಿದ್ದು ಎಂದು ಗೊತ್ತಿಲ್ಲ.

ತಿಮ್ಮೇಗೌಡರು ಒಬ್ಬ ಮಗುವನ್ನು ದತ್ತುಸ್ವೀಕಾರ ಮಾಡಿದ್ದಾರೆ , ಆ ಬಗ್ಗೆ ದಾಖಲಾತಿ ಇಲ್ಲ , ಶಾಸ್ತ್ರದಂತೆ ಸ್ವೀಕಾರ ಮಾಡಿದ್ದಾರೆ ಎಂದು ನನ್ನ ದೊಡ್ಡಪ್ಪ ಹೇಳಿದ್ದಾರೆ. ಪ್ರತಿವಾದಿ-1, 3, 4, 5, 7 ರವರ ಹೆಸರಿನಲ್ಲಿ ಇತರೆ ಆಸ್ತಿಗಳು ಇವೆ ಎಂದು ಹೇಳಿದ್ದೀರಿ , ಆ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಹೇಳಿರುತ್ತಾರೆ. ನನ್ನ ದೊಡ್ಡಪ್ಪ ಆ ರೀತಿಗಳು ಆಸ್ತಿಗಳಿವೆ ಎಂದು ಹೇಳಿದರು , ನನಗೆ ಖುದ್ದಾಗಿ ಗೊತ್ತಿಲ್ಲ. ಯಾರ ಹೆಸರಿನಲ್ಲಿ ಆಸ್ತಿಗಳಿವೆ ಎಂದು ಸಂಬಂಧಪಟ್ಟ ಇಲಾಖೆಗಳಲ್ಲಿ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಾರಾಯಣಗೌಡ ಬಿನ್ ತಿರುಮಲೇಗೌಡರವರ ಹೆಸರಿನಲ್ಲಿ ಯಾವ ಜಮೀನುಗಳಿವೆ ಎಂದು ಗೊತ್ತಿಲ್ಲ. ಸ ನಂ 70/11 ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನಾರಾಯಣಗೌಡರು ಬೇರೆ ಯಾವ ದಾವೆ ಸಲ್ಲಿಸಿದ್ದಾರೆ , ವಕೀಲರು ಯಾರು ಎಂದು ನನಗೆ ಗೊತ್ತಿಲ್ಲ. ತಿಮ್ಮೇಗೌಡರಿಗೆ ಇಬ್ಬರು ಹೆಣ್ಣು ಮಕ್ಕಳು , ಆ ಆಸ್ತಿ ಅವರಿಗೆ ಸಂಬಂಧಿಸಿದ್ದು ಎಂದು ತಿಳಿದಿದ್ದರೂ ಸಹ ತಿಳಿದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಈ

ದಾವಾ ವಿಚಾರ ನನ್ನ ದೊಡ್ಡಪ್ಪನಿಗೆ ಗೊತ್ತಿರಲಿಲ್ಲ. ನಿಮಗೆ ಈ ದಾವೆಯ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್, ಆಲೂರು